ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1575
ಉತ್ತರಿಸಬೇಕಾದ ದಿನಾಂಕ	:	24.09.2021.
ಸದಸ್ಯರ ಹೆಸರು	:	ಶ್ರೀ ಸುನೀಲ್ ಸುಬ್ರಮಣಿ ಎಂ. ಪಿ. (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು	:	ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರಸ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆ, ವಿರಾಜಪೇಟೆನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಮೀಪದಲ್ಲಿ ನಿರ್ಮಾಣಗೊಳ್ಳುತ್ತಿರುವ ಒಳಾಂಗಣ ಕ್ರೀಡಾಂಗಣದ ಕಾಮಗಾರಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದು ಯಾವಾಗ ಪ್ರಾರಂಭವಾಯಿತು; ಹಾಗೂ ಇಲ್ಲಿಯವರೆಗೂ ಇದು ಪೂರ್ಣಗೊಳ್ಳದಿರಲು ಕಾರಣಗಳೇನು; (ವಿವರ ನೀಡುವುದು)	ಬಂದಿದೆ. ಕೊಡಗು ಜಿಲ್ಲೆಯ ವಿರಾಜಪೇಟೆ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮೀಪದಲ್ಲಿ ರೂ. 326.65 ಲಕ್ಷಗಳ ಅಂದಾಜು ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿಗೆ ದಿನಾಂಕ: 12.03.2013ರಂದು ಕಾರ್ಯಾದೇಶ ಪತ್ರ ನೀಡಲಾಗಿರುತ್ತದೆ. ಅಂದಾಜು ಪಟ್ಟಿಯಂತೆ ಒಳಾಂಗಣ ಕ್ರೀಡಾಂಗಣದ ಕಟ್ಟಡ ನಿರ್ಮಾಣ, ಗೋಡೆಗಳಿಗೆ ಪ್ಲಾಸ್ಟ್ರಿಂಗ್ ಮಾಡುವುದು, ಎಂ.ಎಸ್. ಟ್ಯೂಬ್ಯೂಲರ್ ಟ್ರಸ್ ಅಳವಡಿಸಿ, ಮೇಲ್ಛಾವಣಿಯಾಗಿ ಜಿ.ಐ. ಶೀಟ್ಸ್ ಅಳವಡಿಸುವುದು, ಕಿಟಕಿ, ಬಾಗಿಲುಗಳನ್ನು ಅಳವಡಿಸುವುದು, ಶೌಚಾಲಯಗಳ ನಿರ್ಮಾಣ, ಬಣ್ಣ ಬಳಿಯುವುದು ಹಾಗೂ ಇತರೆ ಸಿವಿಲ್ ಕಾಮಗಾರಿಯನ್ನು ನಿರ್ವಹಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. ಕಾಮಗಾರಿಯ ಅನುಮೋದಿತ ಅಂದಾಜಿನ ಅನ್ವಯ (scope of work) ಪ್ರಸ್ತುತ ಪೂರ್ಣಗೊಂಡಿದೆ. ಟೆಂಡರ್ ನಲ್ಲಿ ಇಲ್ಲದ 1)ವಿದ್ಯುತ್ ಕಾಮಗಾರಿ 2) ಟರ್ಬೋ ವೆಂಟಿಲೇಟರಗಳನ್ನು ಅಳವಡಿಸುವುದು 3) ನೀರು ಸರಬರಾಜು ಮತ್ತು ಶೌಚಾಲಯಗಳು 4) ಅಲ್ಯೂಮಿನಿಯಂ ಕಿಟಕಿಗಳನ್ನು ಅಳವಡಿಸುವ ಕೆಲಸಗಳು ಹಾಗೂ 5) ಕೂಡು ರಸ್ತೆ ಹಾಗೂ ಒಳಾಂಗಣ ಕ್ರೀಡಾಂಗಣ ಕಟ್ಟಡದ ಸುರಕ್ಷತೆಯ ದೃಷ್ಟಿಯಿಂದ ಕಟ್ಟಡದ ಬಲಭಾಗಕ್ಕೆ ಆರ್.ಸಿ.ಸಿ. ತಡೆಗೋಡೆ ನಿರ್ಮಿಸುವುದು ಅತ್ಯಾವಶ್ಯಕವಾಗಿದ್ದು, ಹೆಚ್ಚುವರಿ ಅನುದಾನದ ಅಗತ್ಯವಿರುತ್ತದೆ.
ಆ)	ಈ ಕಾಮಗಾರಿಯ ಅಂದಾಜು ಮೊತ್ತ ಪ್ರಾರಂಭದಲ್ಲಿ ಎಷ್ಟಿತ್ತು; ಇಲ್ಲಿಯವರೆಗೂ ಬಿಡುಗಡೆಯಾಗಿರುವ ಮತ್ತು ಖರ್ಚಾಗಿರುವ ಹಣವೆಷ್ಟು; (ವಿವರ ನೀಡುವುದು)	ಕಾಮಗಾರಿಯ ಅಂದಾಜು ಮೊತ್ತ ರೂ. 3,11,20,000/-ಗಳು ಒಳಾಂಗಣ, ಕ್ರೀಡಾಂಗಣ ನಿರ್ಮಿಸಲು ಇಲ್ಲಿಯವರೆಗೂ ಬಿಡುಗಡೆ ಮಾಡಿರುವ ಮೊತ್ತ ರೂ. 3,25,57,641/-ಗಳು. ಒಳಾಂಗಣ ಕ್ರೀಡಾಂಗಣ

ನಿರ್ಮಿಸಲು ಇಲ್ಲಿಯವರೆಗೂ ಖರ್ಚಾಗಿರುವ ಮೊತ್ತ ರೂ. 3,25,57,641/- ಗಳ ವಿವರ ಕೆಳಗಿನಂತಿದೆ :-

ಕ್ರ. ಸಂ	ಬಿಲ್ ವಿವರ	ದಿನಾಂಕ	ಮೊತ್ತ
	1st R.A. Bill	12.03.2014	20,24,463.00
	2nd R.A. Bill		22,99,424.00
	3rd R.A. Bill	28.06.2014	35,75,822.00
	4th R.A. Bill	20.11.2014	16,67,037.00
	5th R.A. Bill	13.03.2015	24,08,758.00
	6th R.A. Bill	16.01.2019	50,00,000.00
		23.03.2019	24,32,785.00
	7th R.A Bill	19.08.2019	50,00,000.00
		29.11.2019	25,00,000.00
		24.02.2020	56,49,352.00
		ಒಟ್ಟು	**3,25,57,641.00**

ಇ)	ಈ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? (ಮಾಹಿತಿ ನೀಡುವುದು)	ಟೆಂಡರ್ ಐಟಂಗಳನ್ವಯ ಒಳಾಂಗಣ ಕ್ರೀಡಾಂಗಣ ನಿರ್ಮಿಸುವ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಟೆಂಡರ್ ನಲ್ಲಿ ಇಲ್ಲದ 1)ವಿದ್ಯುತ್ ಕಾಮಗಾರಿ 2) ಟರ್ಬೋ ವೆಂಟಿಲೇಟರಗಳನ್ನು ಅಳವಡಿಸುವುದು 3) ನೀರು ಸರಬರಾಜು ಮತ್ತು ಶೌಚಾಲಯಗಳು 4) ಅಲ್ಯೂಮಿನಿಯಂ ಕಿಟಕಿಗಳನ್ನು ಅಳವಡಿಸುವ ಕೆಲಸಗಳು ಹಾಗೂ 5) ಕೂಡು ರಸ್ತೆ ಹಾಗೂ ಒಳಾಂಗಣ ಕ್ರೀಡಾಂಗಣ ಕಟ್ಟಡದ ಸುರಕ್ಷತೆಯ ದೃಷ್ಟಿಯಿಂದ ಕಟ್ಟಡದ ಬಲಭಾಗಕ್ಕೆ ಆರ್.ಸಿ.ಸಿ. ತಡೆಗೋಡೆ ನಿರ್ಮಿಸುವುದು ಅತ್ಯಾವಶ್ಯಕವಾಗಿದ್ದು, ಈ ಕಾಮಗಾರಿಯನ್ನು ಕೈಗೊಳ್ಳಲು ರೂ. 91.20 ಲಕ್ಷಗಳ ಅಂದಾಜು ಮೊತ್ತ ಅವಶ್ಯಕತೆಯಿದ್ದು, ಅನುದಾನ ಲಭ್ಯತೆಯ ಅನ್ವಯ ಆದ್ಯತೆ ಮೇರೆಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಪರಿಗಣಿಸಲಾಗುವುದು.

ವೈಎಸ್‌ಡಿ/ಇಬಿಬಿ/173/2021

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.